WPP No. SK/UDP/01. D.O.P - 15th of every month from Udupi HPO
ಬೆಲೆ ರೂ.2.50

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101.
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 94484 37893

# ಶ್ರೀ ಶಾರದಾ

ಮಾಸಪತ್ರಿಕೆ - 15ನೇ ಫೆಬ್ರವರಿ 2008

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ☎ 2520754

ಸಂಪುಟ-8 ಸಂಚಿಕೆ-2 ಪುಟಗಳು-8 Registered Under No.KA/SK/UDP/1260/2006-2008 Dated from 01-01-2006 to 31-12-2008.

# ಶ್ರೀಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟ-2008
# ವಿನ್ನರ್ಸ್ - ಎನ್.ಐ.ಟಿ.ಕೆ ಸುರತ್ಕಲ್, ರನ್ನರ್ಸ್‌ಅಪ್ - ಉಡುಪಿ


ವಿನ್ನರ್ಸ್ ಎನ್.ಐ.ಟಿ.ಕೆ ಸುರತ್ಕಲ್


ರನ್ನರ್ಸ್‌ಅಪ್ ಉಡುಪಿ ತಂಡ

''ಉಡುಪಿಯ ಶ್ರೀ ಶಾರದಾ ಟ್ರೋಫಿ ಕ್ರಿಕೆಟ್ ಪಂದ್ಯಾಟವು ಕಳೆದ 17 ವರ್ಷಗಳಿಂದ ಸಮಾಜಬಾಂಧವರ ಸಂಘಟನೆಯ ಮೂಲಕ ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಆಶ್ರಯದಲ್ಲಿ ನೆರವೇರುತ್ತಿದೆ. ಇದರಿಂದ ಪ್ರೀತಿ, ಐಕ್ಯತೆ ನಮ್ಮೊಳಗೆ ಬೆಳೆಯುತ್ತದೆ. ಇತ್ತೀಚೆಗೆ ಸಾಹಿತ್ಯ ಸಮ್ಮೇಳನವನ್ನು ಕೂಡಾ ನಡೆಸಿ ವಿವಿಧ ಕ್ಷೇತ್ರಗಳಲ್ಲಿ ಮಾಡಿದ ಸಾಧನೆಗಾಗಿ ಪ್ರಶಂಸೆಗೆ ಒಳಪಟ್ಟಿದೆ. ದ.ಕ., ಉಡುಪಿ ಮಾತ್ರವಲ್ಲದೇ ಬೆಂಗಳೂರು, ಮೈಸೂರು, ಕಾಸರಗೋಡು ತಂಡಗಳು ಹೀಗೆ ಒಟ್ಟು 18 ತಂಡಗಳು ಈ ವರ್ಷವೂ ಆಗಮಿಸಿ ಸಮಾಜದ ಸಂಘಟನೆಗೆ ಕಾರಣವಾಗಿದೆ'' ಎಂದು ಶ್ರೀ ಸುಬ್ರಹ್ಮಣ್ಯ ಸಭಾ ಮುಂಬಯಿಯ ಅಧ್ಯಕ್ಷರಾದ ಶ್ರೀ ಬೈಲೂರು ಬಾಲಚಂದ್ರರಾಯರು ನುಡಿದರು.

(3ನೇ ಪುಟಕ್ಕೆ ...)

# ಅಧ್ಯಕ್ಷರ ಮಾತು

**ಉಡುಪಿಯ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾಯರು ಸೇವಾವಧಿಯಲ್ಲಿ ನಮ್ಮ ಸಂಘದ ಈ ವರೆಗಿನ ದಾಖಲೆಗಳನ್ನು ಪರಿಶೀಲಿಸಿ ಅಂಕಿ-ಅಂಶಗಳನ್ನು ಸಂಗ್ರಹಿಸಿ ಸಂಘ ಸ್ಥಾಪನೆಯಾದಂದಿನಿಂದ ಇಂದಿನವರೆಗೆ ಬೆಳೆದುಬಂದ ದಾರಿಯನ್ನು ಶ್ರೀ ಶಾರದಾ ಪತ್ರಿಕೆಗೆ ಬಿಡುಗಡೆ ಮಾಡಿದ್ದಾರೆ. ಅದರಂತೆ ಸಂಗ್ರಹಿಸಿದ ಮಾಹಿತಿಗಳು ಈ ಕೆಳಗಿನಂತಿವೆ.**

1964ರಲ್ಲಿ ಪ್ರಾರಂಭಗೊಂಡ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವು ಶ್ರೀ ಕೆ. ರಾಘವೇಂದ್ರರಾವ್ ಅವರ ಅಧ್ಯಕ್ಷತೆಯಲ್ಲಿ 11 ವರ್ಷಗಳ ಕಾಲ ಉತ್ತಮ ಸಾಧನೆಯನ್ನು ಕಂಡಿತು. ನಂತರ 9 ವರ್ಷ ಶ್ರೀ ಅಲೆವೂರು ಶ್ಯಾಮರಾವ್ ಅಧ್ಯಕ್ಷರಾಗಿದ್ದು ಆ ಸಮಯದಲ್ಲಿ ಸಂಘಕ್ಕೆ ಸ್ವಂತ ಸ್ಥಳ ಮತ್ತು ಕಟ್ಟಡಗಳ ಭಾಗ್ಯ ಬಂದಿತು. 1984ರಿಂದ ಅಂಬಲಪಾಡಿ ಕೃಷ್ಣರಾಯರು ಅಧ್ಯಕ್ಷರಾಗಿ ಸಂಘವನ್ನು ಒಂದು ಬಲವಾದ ಸಂಸ್ಥೆಯಾಗಿ ರೂಪಿಸುವಲ್ಲಿ ಯಶಸ್ವಿಯಾದರು. ಶ್ರೀ ಎ. ಕೃಷ್ಣರಾಯರು ಸಂಘದ ಪ್ರಾರಂಭದಿಂದ ಕೋಶಾಧಿಕಾರಿಯಾಗಿ, ಬಳಿಕ ಅಧ್ಯಕ್ಷರಾಗಿ, ಈಗ ಗೌರವಾಧ್ಯಕ್ಷರಾಗಿ ನಮ್ಮೊಂದಿಗೆ ಇದ್ದು ಒಟ್ಟು 44 ವರ್ಷ ಸಂಘದ ಉನ್ನತಿಗಾಗಿ ಸುದೀರ್ಘ ಸೇವೆ ಸಲ್ಲಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ. ಶ್ರೀ ಎ. ಕೃಷ್ಣರಾಯರ ಮಾರ್ಗದರ್ಶನ, ಕಾರ್ಯವೈಖರಿ ಮತ್ತು ಸಲಹೆ ನಮಗೆ ದಾರಿದೀಪವಾಗಿದೆ. ಅಂಬಲಪಾಡಿ ಕೃಷ್ಣ ರಾಯರಿಗೆ ಶ್ರೀ ಪರಮಾತ್ಮನು ಒಳ್ಳೆಯ ಆರೋಗ್ಯವನ್ನು ಕರುಣಿಸಲಿ ಮತ್ತು ನಮ್ಮನ್ನು ಇನ್ನಷ್ಟು ಮುನ್ನಡೆಸಲಿ ಎಂದು ಸಂಘದ ಪದಾಧಿಕಾರಿಗಳು ಪ್ರಾರ್ಥಿಸುತ್ತಾರೆ.

ಸಂಘದ ಅಧ್ಯಕ್ಷರಾಗಿ 8 ವರ್ಷ ಕಾಲ ಡಾ। ಪಿ. ವಿಠಲರಾವ್ ಮಂಟಪದ ಬೆಳವಣಿಗೆಗೆ ಮತ್ತು ಶ್ರೀಶಾರದಾ ದೇವಸ್ಥಾನದ ಅಭಿವೃದ್ಧಿಗೆ ದುಡಿದಿದ್ದಾರೆ ಮತ್ತು ಸಂಘವನ್ನು ಇನ್ನಷ್ಟು ಬಲಪಡಿಸಿದ್ದಾರೆ.

ಶ್ರೀ ಎಮ್. ಪಾಲಚಂದ್ರರಾಯರು 1994ರಿಂದ 9 ವರ್ಷ ಕಾಲ ಕಾರ್ಯದರ್ಶಿಯಾಗಿ ಮತ್ತು ಉಪಾಧ್ಯಕ್ಷರಾಗಿ 2005ರಿಂದ ಅಧ್ಯಕ್ಷರಾಗಿ ಸಂಘವನ್ನು ಮುನ್ನಡೆಸಿ, ನಮ್ಮ ಸಮಾಜ ಬಾಂಧವರನ್ನು ಒಗ್ಗೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ

ನಮ್ಮ ಸಂಘವು ಪ್ರಗತಿ ಪಥದಲ್ಲಿ ನಡೆಯುತ್ತಿದ್ದು ಅದರ ಪ್ರಗತಿಯ ಪಕ್ಷಿನೋಟವು ಹೀಗಿದೆ.

**ಸದಸ್ಯರ ಸಂಖ್ಯೆ :** ಸಂಘದ ಪ್ರಾರಂಭದಿಂದ 2002ನೇ ಇಸವಿಯ ತನಕ ಸುಮಾರು 198 ತಲುಪಿದ ಸದಸ್ಯತ್ವವು 2005ರಲ್ಲಿ 200ರ ಗಡಿದಾಟಿ 2007ರಲ್ಲಿ ಕ್ಷಿಪ್ರ ಪ್ರಗತಿಯನ್ನು ದಾಖಲಿಸಿ 510 ಸದಸ್ಯತ್ವವನ್ನು ತಲಪಿದೆ. 2005ನೇ ಇಸವಿಯ ತನಕ ಸ್ಥಾಪನೆಯಾಗದಿರುವ ಸದಸ್ಯತ್ವ ನಿಧಿಯು 2006ರಲ್ಲಿ ಆರಂಭಗೊಂಡು 2007ನೇ ಇಸವಿಯಲ್ಲಿ 38,000 ರೂಪಾಯಿಗಳಷ್ಟು ಬೆಳೆದಿದೆ.

**ಠೇವಣಿ ಸಂಗ್ರಹ :** 2002ರಲ್ಲಿ ಇದ್ದ ಒಟ್ಟು ಠೇವಣಿ ರೂ.18,16,000/- 2005ರಲ್ಲಿ ರೂ.24,68,000/-ಕ್ಕೆ ತಲುಪಿ 2007ರಲ್ಲಿ ರೂ.34,45,000/-ಕ್ಕೆ ಏರಿದೆ. ಈ ಮಧ್ಯೆ ವಿವಿಧ ಮೂಲಗಳಿಂದ ನಿಧಿ ಸಂಗ್ರಹಿಸಿ ಜ್ಞಾನಮಂದಿರದ ನವೀಕರಣಕ್ಕಾಗಿ ಸುಮಾರು ರೂ.3,00,000/- ವಿನಿಯೋಗಿಸಲಾಗಿತ್ತು. ಆದಾಗ್ಯೂ 2007ರಲ್ಲಿ ಒಟ್ಟು ನಿರಖು ಠೇವಣಿಯಲ್ಲಿ ವಾರ್ಷಿಕ 20% ಪ್ರಗತಿ ಸಾಧಿಸಿರುವುದು ಗಮನಾರ್ಹ ಸಂಗತಿಯಾಗಿದೆ.

**ಶಾರದಾ ಮಂಟಪ ನವೀಕರಣ :** ನೂತನ ಮಂಡಳಿಯು ಅಸ್ತಿತ್ವಕ್ಕೆ ಬಂದ ಮೇಲೆ ಶ್ರೀಶಾರದಾ ಮಂಟಪವನ್ನು ಅಗಲಗೊಳಿಸಿ, ಗಾಳಿ-ಬೆಳಕು ಚೆನ್ನಾಗಿ ಬರುವಂತೆ ಮಾಡಿದ್ದು, ಮಂಟಪದಲ್ಲಿರುವ ವಧೂ-ವರರ ಕೊಠಡಿಗಳಲ್ಲಿ ಶೌಚಾಲಯ ಜೋಡಣೆ, ದೇವಸ್ಥಾನದ ಅರ್ಚಕರ ಮನೆ ನವೀಕರಣ (ಬೆಡ್‌ರೂಂಗೆ ಶೌಚಾಲಯ ಅಳವಡಿಕೆ, ಅಡುಗೆಕೋಣೆಗೆ ಪ್ಲಾಟ್‌ಫಾರಂ ಅಳವಡಿಸುವಿಕೆ), ಸಭಾಂಗಣದ ಊಟದ ಹಾಲ್‌ನ ಬದಿಯಲ್ಲಿ ಸ್ನಾನಗೃಹಗಳು, ಗಂಡಸರಿಗೆ ಬೇರೆಯೇ ಶೌಚಾಲಯ ನಿರ್ಮಾಣ, ಅಡುಗೆ ಕೋಣೆಯ ದುರಸ್ತಿ, ಮಂಟಪ ವ್ಯವಸ್ಥಾಪಕರ (ಮೆನೇಜರ್) ಹೊಸ ಕಛೇರಿ ನಿರ್ಮಾಣ, ಸಭಾಂಗಣದ ಎದುರು ಬದಿಯಲ್ಲಿ ವಿಶಾಲವಾದ ಬಾಗಿಲಿನ ಜೋಡಣೆ ಮೊದಲಾದವುಗಳನ್ನು ಮಾಡಿದ್ದು ಶ್ರೀಶಾರದಾ ಮಂಟಪವು ಈಗಿನ ಕಾಲದ ಅಗತ್ಯತೆ ಮತ್ತು ಅನುಕೂಲತೆಗಳಿಗೆ ತಕ್ಕಂತೆ ಆಧುನೀಕರಣವಾಗಲು ಸಾಧ್ಯವಾಗಿದೆ.

**ರತ್ನಸ್ಮೃತಿ-ಜ್ಞಾನಮಂದಿರ :** ರತ್ನಸ್ಮೃತಿ ಕಟ್ಟಡವನ್ನು ಅಭಿವೃದ್ಧಿಪಡಿಸಿ ವಿಶಾಲವಾದ ಜ್ಞಾನಮಂದಿರವನ್ನು ನಿರ್ಮಾಣ ಮಾಡಿ ಇತ್ತೀಚಿನ ದಿನಗಳಲ್ಲಿ ಸಮಾಜಬಾಂಧವರು/ ಸಾರ್ವಜನಿಕರು ಇದು ಅತ್ಯುತ್ತಮ 'ಮಿನಿ ಹಾಲ್' ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿರುವುದು ಆಡಳಿತ ಮಂಡಳಿಗೆ ಮತ್ತು ಸಂಘದ ಸರ್ವಸದಸ್ಯರಿಗೆ ಸಂತೋಷ ಉಂಟು ಮಾಡುವ ವಿಚಾರವಾಗಿದೆ.

**ಶ್ರೀಶಾರದಾ ದೇವಸ್ಥಾನ :** 1988ರಲ್ಲಿ ಪ್ರಾರಂಭಗೊಂಡ ಶ್ರೀಶಾರದಾ ದೇವಸ್ಥಾನವು ವರ್ಷಗಳುರುಳಿದಂತೆ ಹೆಚ್ಚು ಹೆಚ್ಚು ಭಕ್ತರನ್ನು ಆಕರ್ಷಿಸುತ್ತಿದೆ. ಶ್ರೀದೇವಸ್ಥಾನದಲ್ಲಿ ನಡೆಯುವ ಸಾಮೂಹಿಕ ಗಣಹೋಮ, ಸಾಮೂಹಿಕ ಚಂಡಿಕಾಯಾಗ, ಸಾಮೂಹಿಕ ದುರ್ಗಾ ನಮಸ್ಕಾರ ಮೊದಲಾದ ಕಾರ್ಯಕ್ರಮಗಳು ಅಲ್ಲದೇ ಪ್ರತೀ ತಿಂಗಳೂ ನಡೆಯುವ ಹೂವಿನ ಪೂಜೆ, ನವರಾತ್ರಿ-ಕಿರು ನವರಾತ್ರಿಯಲ್ಲಿ ನಡೆಯುವ ವಿಶೇಷ ಸೇವೆಗಳು ಎಲ್ಲರ ಗಮನ ಸೆಳೆದಿವೆ. ಶ್ರೀದೇವಸ್ಥಾನದಲ್ಲಿ ಪ್ರತಿ ಆದಿತ್ಯವಾರ ಸ್ವಾಧ್ಯಾಯ ಅನುಷ್ಠಾನ ಮಂಡಲದಿಂದ ಪಾರಾಯಣ ಪಠಣ, ಮಹಿಳೆಯರಿಂದ ಪ್ರತೀ ಶುಕ್ರವಾರ ಲಲಿತಾ ಸಹಸ್ರನಾಮ ಪಠಣ, ಭಜನೆ, ಪ್ರತೀ ತಿಂಗಳ 2ನೇ ಶನಿವಾರ ನಡೆಯುವ ಗಮಕವಾಚನ ಪ್ರವಚನ ಮೊದಲಾದ ಕಾರ್ಯಕ್ರಮಗಳು ಇಲ್ಲಿಗೆ ಆಗಮಿಸುವ ಭಕ್ತರ ಸಂಖ್ಯೆಯು ಹೆಚ್ಚಲು ಕಾರಣವಾಗಿದೆ.

ಶ್ರೀಶಾರದಾ ದೇವಸ್ಥಾನದಲ್ಲಿ ಹುಂಡಿಯ ಆದಾಯ 2002ರಲ್ಲಿ ರೂ.8,867/-, 2005ರಲ್ಲಿ ರೂ.28,418/- ಮತ್ತು 2007ರಲ್ಲಿ ರೂ.35,385/- ಆಗಿದೆ. ಇದು ದೇವಸ್ಥಾನದ ಪ್ರಗತಿಯ ದ್ಯೋತಕವಾಗಿದೆ. ಶ್ರೀಶಾರದಾ ಮಾತೆಗೆ ಸಮರ್ಪಿಸುವ ಸೀರೆಗಳ ಕಾಣಿಕೆ ವರ್ಷಕ್ಕೆ 50ರಿಂದ 100ಕ್ಕೆ ಏರಿದೆ. ಶ್ರೀಶಾರದಾ ದೇವಸ್ಥಾನಕ್ಕೆ ದಾನಿಗಳ ನೆರವಿನಿಂದ ಸ್ವಯಂಚಾಲಿತ ಪಂಚವಾದ್ಯವನ್ನು ಅಳವಡಿಸಿಕೊಳ್ಳಲಾಗಿದೆ.

**ನಿತ್ಯಪೂಜಾ ನಿಧಿ :** 2002ರಲ್ಲಿ ರೂ.4,21,000/-ರಷ್ಟು ಇದ್ದ ನಿತ್ಯಪೂಜಾ ನಿಧಿಯು 2007ರಲ್ಲಿ ರೂ.4,42,000/-ಗಳಿಗೆ ಏರಿದೆ.

**ವಿದ್ಯಾರ್ಥಿವೇತನ ವಿತರಣೆ :** ವಿದ್ಯಾರ್ಥಿ ವೇತನ ವೇದಿಕೆಯಲ್ಲಿ 2002ರಲ್ಲಿ ವಿದ್ಯಾರ್ಥಿವೇತನ ನಿಧಿಯು ರೂ.6,79,000/- ಇದ್ದು 2005ರಲ್ಲಿ ಅದು ರೂ.11,76,000/-ಕ್ಕೆ ಏರಿತು. ಈಗ ಅದು ರೂ.13,40,000/-ಕ್ಕೆ ಏರಿದೆ. ವರ್ಷಕ್ಕೆ ರೂ.40,000/- ವಿದ್ಯಾರ್ಥಿವೇತನ ವಿತರಣೆ ಯಾಗುತ್ತಿದ್ದು ಈಗ ಸಾಲ ವಿದ್ಯಾರ್ಥಿವೇತನ ಸೇರಿ ರೂ.2,10,000/- ವಾರ್ಷಿಕವಾಗಿ ವಿದ್ಯಾರ್ಥಿ ವೇತನ ವಿತರಣೆಯಾಗುತಿದೆ.

**ವಿವಿಧ ವೇದಿಕೆಗಳು :** 2002-03ರಲ್ಲಿ ಕೆಲವೇ ಇದ್ದ ವೇದಿಕೆಗಳು ಈಗ 13 ವೇದಿಕೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಈ ಎಲ್ಲಾ ವೇದಿಕೆಗಳು ಹೊಸ ಹೊಸ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಉದಾಹರಣೆಗಾಗಿ ಇತ್ತೀಚೆಗೆ ನಡೆದ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಕನ್ನಡ ಸಾಹಿತ್ಯ ಸಮ್ಮೇಳನ, ವ್ಯಕ್ತಿತ್ವ ವಿಕಸನ ಶಿಬಿರ, ಶ್ರೀಶಾರದಾ ಕ್ರಿಕೆಟ್ ಟ್ರೋಫಿ ಇತ್ಯಾದಿ.

**ಮುಂದಿನ ಯೋಜನೆಗಳು :**

1) ಶ್ರೀಶಾರದಾ ದೇವಸ್ಥಾನಕ್ಕೆ ಸ್ವಾಗತ ಗೋಪುರ ನಿರ್ಮಾಣ

2) ಶ್ರೀದೇವರ ಅಂಗಣಕ್ಕೆ ಇಂಟರಲಾಕ್ ಅಳವಡಿಸುವುದು.

3) ಶ್ರೀಶಾರದಾ ಮಂಟಪದ ಮೊದಲ ಅಂತಸ್ತಿನ ವಿಸ್ತರಣೆ ಹಾಗೂ ಫಾಲ್‌ಸೀಲಿಂಗ್ ಅಳವಡಿಕೆ.